ನಮಗೆ ಹೆದರಿ ಒಳಗೊಳಗೆ ಅಸಮಾಧಾನವಿದ್ದರೂ ತೋರಿಸಿಕೊಳ್ಳದಂತಿದ್ದಾರೆ. ಮುಂದೆಯೂ ಹಾಗೆ ಇರುತ್ತಾರೆ ಎಂಬ ಗ್ಯಾರಂಟಿ ಏನಿದೆ? ಜಗಳವಾಡಿಕೊಂಡು ಮನಸ್ಸುಗಳನ್ನು ಮುರಿದುಕೊಂಡು, ಒಬ್ಬರನ್ನು ಕಂಡರೆ ಒಬ್ಬರಿಗೆ ಆಗದಂತಾದ ಮೇಲೆ ದೂರಾಗುವುದಕ್ಕಿಂತ ನಗುನಗುತ್ತಾ ಬೇರೆಯಾಗುವುದೇ ಒಳ್ಳೆಯದಲ್ಲವೇ? ಅಕ್ಕ ಹೇಳುವುದು ನಿಜವೇ. ನಗುತ್ತಲೇ ಹೋಗೋಣ. ಅಂತೂ ಎರಡು ಮನೆ ಆಗಲೇಬೇಕಾಗಿದೆ. ಒಡಹುಟ್ಟಿದವರನ್ನು ದೂರ ಮಾಡುವಂತಹ ದುಸ್ಥಿತಿ ತಂದಿಟ್ಟ ವಿಧಿಯನ್ನು ಹಳಿಯುತ್ತಾ ನಿಟ್ಟುಸಿರು ಬಿಟ್ಟು, ತನ್ನ ಮನದ ತಳಮಳ, ಬೇಸರ ಅಕ್ಕನಿಗೆ ಅದು ಅರಿವಾಗದಿರಲಿ ಎಂದು ಜಗದೀಶರು ಎದ್ದು ಒಳ ನಡೆದರು. ಮುಂದೇನಾಗುವುದೋ, ಮಾದೇವ ತಾನು ಹೇಳುವುದನ್ನು ಹೇಗೆ ತೆಗೆದುಕೊಳ್ಳುತ್ತಾನೋ ಅನ್ನೊ ದುಗುಡದಿಂದಲೇ ಆವತ್ತೆಲ್ಲ ಇದ್ದರು.

ಹಬ್ಬಕ್ಕೆ ಬಂದಿದ್ದ ನೆಂಟರೆಲ್ಲಾ ಒಬ್ಬಬ್ಬರಾಗಿ ಹೊರಟು ನಿಂತರು. ಅವರೆಲ್ಲರಿಗೂ ಉಡುಗೊರೆ ನೀಡಿ ತಿಂಡಿಗಳನ್ನು ಕಟ್ಟಿಕೊಟ್ಟು ಬೀಳ್ಕೊಟ್ಟರು. ಹಬ್ಬ ಕಳೆದು ನಾಲ್ಕೈದು ದಿನಗಳವರೆಗೂ ಇದೇ ಆಯಿತು. ಎಲ್ಲರನ್ನು ಕಳಿಸಿದರೂ ಹಿರಿಯಕ್ಕ ಅಂಬಿಕರನ್ನು ಮಾತ್ರ ಜಗದೀಶರು ಉಳಿಸಿಕೊಂಡರು. ಮನೆ ಬೇರೆ ಮಾಡುವ ಮಾತುಕತೆ ನಡೆಯುವಾಗ ಹಿರಿಯಳಾದ ಅಕ್ಕ ಜೊತೆಯಲ್ಲಿ ಇದ್ರೆ ಒಳ್ಳೆಯದು ಅನ್ನೋ ನಂಬಿಕೆ ಅವರಿಗೆ. ಎಲ್ಲ ನೆಂಟರು ಹೋದ ನಂತರ ಅಂದು ಸಂಜೆನೇ ಅಕ್ಕನನ್ನು ಮಾದೇವನನ್ನು ತಮ್ಮ ಕೋಣೆಯೊಳಗೆ ಕರೆಸಿಕೊಂಡು ಯಾರು ಇತ್ತ ಬರಬಾರದು ಅಂತ ಮಕ್ಕಳಿಗೆ, ಹೆಂಗಸರಿಗೆ ಹೇಳಿ ಜಗದೀಶರು ತಮ್ಮ ಕೋಣೆಯ ಬಾಗಿಲನ್ನು ಮುಚ್ಚಿಕೊಂಡರು. ಎಂದೂ ಹೀಗೆ ಮಾಡದ ಮನೆಯ ಯಜಮಾನ ಇಂದೇಕೆ ಹೀಗೆ ಅಂತ, ಯಾವ ವಿಚಾರ ಇರಬಹುದು ಅನ್ನೊ ಕುತೂಹಲ ಮನೆಯ ಹೆಂಗಸರಿಗೆ ಮೂಡಿದರೂ ಮನೆ ಕೆಲಸದ ಒತ್ತಡದ ನಡುವೆ ಅದೇನು ಅಷ್ಟು ಗಹನವಾದ ವಿಚಾರ ಅನಿಸದೆ ಅಡುಗೆ ಕೋಣೆ ಸೇರಿಕೊಂಡು ಬಿಟ್ಟರು. ಅವರಿಗೂ ಮಾತನಾಡಿಕೊಳ್ಳುವುದು ಸಾಕಷ್ಟಿತ್ತು. ಹಬ್ಬಕ್ಕೆ ಬಂದು ಹೋದವರ ಬಗ್ಗೆ, ಅವರವರ ತೌರಿನವರ ಬಗ್ಗೆ, ಹಬ್ಬ ಅದ್ದೂರಿಯಾಗಿ ನಡೆದ ಬಗ್ಗೆ ಮಾತನಾಡಿಕೊಳ್ಳುತ್ತಾ ರಾತ್ರಿಗೆ ಅಡುಗೆ ಮಾಡುವ ತಯಾರಿ ನಡೆಸಿದರು.

ಇತ್ತ ಜಗದೀಶರು ತಮ್ಮನನ್ನು, ಅಕ್ಕನನ್ನು ಕೂರಿಸಿ ಮಾತಿಗೆ ಸುರು ಹಚ್ಚಿದರು. 'ಮಾದೇವ, ನಿನ್ನ ಹತ್ರ ಒಂದು ವಿಸ್ಯ ಹೇಳಬೇಕು ಕಣೊ. ಅಕ್ಕನೂ ಇದ್ನೇ ಹೇಳ್ತಾ ಅವ್ಳೆ. ಏನಪ್ಪ ಇದು, ನಮ್ಮಣ್ಣ ಇಂಗೆ ಹೇಳ್ಬುಟ್ರಾ ಅಂತ ಅಂದ್ಕ ಬ್ಯಾಡಾ. ಇದು ನಮ್ಮನೆ ಒಳ್ಳೇದಕ್ಕೆ ನಾ ಹೇಳ್ತಾ ಇರೋದು. ಇಂಗೇಳ್ತಿನಿ ಅಂತ ನೀಯೇನು ಬೇಸ್ರ ಮಾಡ್ಕಂಡು ಬಿಡ್ಬೇಡಾ' ಎಂದು ಮುಂದೆ ಮಾತನಾಡಲು ಕಷ್ಟವಾಗಿ ಜಗದೀಶರು ಚಣ ಹೊತ್ತು ಸುಮ್ನೆ ಕುಂತುಬಿಟ್ಟರು.

ವಿಚಾರ ಏನೂ ಅಂತ ಏಳ್ದೆ ಬರೀ ಪೀಠಿಕೆನೇ ಇಷ್ಟೊತ್ತು ಹಾಕಿದ ಅಣ್ಣನ ಮುಖವನ್ನೇ ನೋಡ್ತಾ 'ಏನಣ್ಣ ವಿಚಾರ, ನಾನು ಬೇಸ್ರ ಮಾಡ್ಕೊಳ್ಳೊ ಅಂತದ್ದು, ನೀ ಏನು ಏಳಿದ್ರೂ ನಂಗೆ ಬ್ಯಾಸ್ರ ಇಲ್ಲ, ಏಳಣ್ಣ ಅದೇನು ವಿಸ್ಯ ಅಂತ, ಅಕ್ಕನೂ ಅದ್ನೆ ಏಳ್ತಾ ಐತೆ ಅಂತಿಯಾ, ಅಂಗಾದ್ರೆ ಅದು ಸರ್ಯಾಗಿ ಇರ್ತದೆ ಬುಡು. ನನ್ನ ಕೇಳಿ ಹೇಳೊದೊ ಏನೈತೆ, ನಿಂಗೆ ಎಂಗೆ ಅನ್ನಸ್ತದೊ ಅಂಗೆ ಮಾಡು. ಅದು ಯಾವ ವಿಚಾರಾ ಆದ್ರೂ ಸರೀನೇ' ಎಂದು ತುಂಬು ಅಭಿಮಾನದಿಂದ ಮಾದೇವ ಹೇಳ್ದಾಗ ಜಗದೀಶರ ಎದೆಗೆ ಸಾವಿರ ಸೂಜಿಮೊನೆಗಳಿಂದ ತಿವ್ದಂಗಾಯ್ತು. ಲಕ್ಷ್ಮಣನಂಗಿರೊ ತಮ್ಮಂಗೆ ನಾನು ಈ ವಿಸ್ಯ ಎಂಗೆ ಏಳ್ಲಿ ಅಂತ ನೊಂದುಕೊಂಡರು. ಮಾತನಾಡಲು ಪದಗಳೇ ಸಿಗದೆ ತಡಕಾಡಿದರು.

'ಅಂಗೆ ಸುಮ್ಕೆ ಕುಂತ್ಕಂಡ್ರೆ ಎಂಗೆ ಜಗ, ಅದೇನು ನ್ಯಾರ್ವಾಗೆ ಯೋಳಿಬುಡು. ಅವಂಗೂ ಅರ್ಥ ಆಗ್ತೈತೆ. ಮನ್ಯಾಗೆ ಎಲ್ಲಾನೂ ಸರಿ ಇಲ್ಲಾ. ಎಲ್ಲಾನೂ ಕೈ ಮೀರೋಕೆ ಮುಂಚೆ ಒಂದ್ತೀರ್ಮಾನ ತಗಳಾದು ವಳ್ಳೆದು ಅಂತ ಯೋಳಿ ಬುಡು ಜಗ' — ಮಾತು ಬಾರದ ಮೂಗನಂತೆ ಕುಂತ್ಕಂಡಿದ್ದ ಹಿರಿ ತಮ್ಮನನ್ನು ಉತ್ತೇಜಿಸಿದರು ಅಂಬಿಕಾ.

ತಮ್ಮನನ್ನು ಅವನ ಸಂಸಾರವನ್ನು ದೂರ ಹೋಗು ಅಂತ ಹೇಳೋಕೆ ಅದೆಷ್ಟು ಕಷ್ಟವಾಗ್ತಾ ಐತೆ, ಅದೆಂಗೆ ಯೋಳದು ಅಂತ ಚಿಂತೆ ಮಾಡ್ತಾನೇ, ಹೇಳದೆ ವಿಧೀನೇ ಇಲ್ಲವಲ್ಲ ಅಂತ ಅಂದುಕೊಂಡು ಜಗದೀಶರು, 'ನೋಡು ಮಾದೇವ, ಎಲ್ಲಾನೂ ನಿಂಗೇ ಗೊತ್ತೈತೆ. ನಾನು ತಗಂಡಿರಾ ತೀರ್ಮಾನಾ ನೀನು ಒಪ್ಕಂಡ್ರೆ ನಿಂಗೂ ಒಳ್ಳೇದು, ನಂಗೂ ಒಳ್ಳೇದು. ನಾವು ಕೊನೆಗಂಟಾ ವೈನಾಗೆ ಇರಬೋದು' ಅನ್ನುತ್ತಾ ತಮ್ಮನ ಮುಖ ನೋಡಿದರು.

ಅಕ್ಕ ಯಾವ ವಿಚಾರ ಕುರಿತು ಮಾತಾಡಿದ್ದು, ಅಣ್ಣ ಹೇಳ್ತಾ ಇರೋ ವಿಚಾರ ಯಾವುದು ಅನ್ನೋದು ಮಾದೇವನ ಸೂಕ್ಷ್ಮ ಮನಸ್ಸಿಗೆ ಅರ್ಥವಾಗಿಬಿಟ್ಟಿತು. ಮನೆ ಪರಿಸ್ಥಿತಿನೂ ಅವನ ಗಮನಕ್ಕೆ ಬಂದಿತ್ತು. ಆದರೆ ಈಟು ಬೇಗ್ನೆ ಅಣ್ಣ ತೀರ್ಮಾನಕ್ಕೆ ಬಂದು ಬುಡ್ತನೆ ಅಂತ ಕನಸು ಮನಸ್ಸಿನಲ್ಲೂ ಅಂದುಕೊಂಡಿರಲಿಲ್ಲ. ಗಾಬರಿಯಿಂದ 'ಏನಣ್ಣ ಇಂಗೆಲ್ಲ ಮಾತಾಡ್ತಿಯಾ, ನಾಯೇನು ತಪ್ಪ ಮಾಡೀನಿ, ನೀನು ಇಂಗೆಲ್ಲ ಮಾತಾಡ ಬ್ಯಾಡ. ನಾನಾಗ್ಲಿ, ಮನೆ ಎಂಗಸ್ರಾಗ್ಲಿ ತಪ್ಪು ಮಾಡಿದ್ರೆ ವೊಟ್ಟೆಗಾಕೊಂಡು ಬಿಟ್ಟುಬುಡು' ದೈನ್ಯತೆಯಿಂದ ಬೇಡಿಕೊಂಡ.

'ಅದು ಅಂಗಲ್ಲ ಮಾದು, ಮನೆವೊಳಗೆ ಕುದಿತಾ ಐತೆ. ಅದು ಅಂಗೇ ಇಂಗಿ ಹೋಗೊ ಕುದಿ ಅಲ್ಲ ಕಣೊ, ಸಿಡಿದು ವೊರಿಕೆ ಬಂದು ಎಲ್ರನೂ ಸುಡೊಕ್ಮುಂಚೆ ಅದನ್ನ ನೀರು ಸುರಿದು ಆರಿಸ್ಬೇಕಲ್ವಾ' ನೊಂದುಕೊಳ್ಳುತ್ತಲೇ ನುಡಿದರು.

'ಅಂಥದ್ದೇನಾಗಿದೆ ಅಣ್ಣ, ಮನೆ ಅಂದ್ಮಾಗೆ ಮಾತು ಬರುತ್ತೆ ಹೋಗುತ್ತೆ, ಅದನ್ಯಾಕಣ್ಣ ದೊಡ್ಡು ಮಾಡ್ತೀಯಾ, ಹೆಂಗಸ್ರಲ್ವಾ ಮಾತಾಡ್ಕತಾರೆ, ಮಾತಾಡ್ಕಳ್ಲಿ ಬುಡು, ನಾವೆ ಒಸಿ ಬುದ್ಧಿ ಏಳಾನಾ, ಅದ್ಕೆಲ್ಲ ನೀ ಏನೇನೋ ಮಾತಾಡಬ್ಯಾಡ' ಎಂದು ಅಣ್ಣನ ಮಾತನ್ನು ಒಪ್ಪದೆ ಮಾದೇಶ ಈ ವಿಚಾರವನ್ನ ಇಲ್ಲಿಗೆ ಬಿಟ್ಟುಬಿಡುವಂತೆ ಮನ ಒಲಿಸಲು ನೋಡಿದ.

'ಅದು ಆಗಲ್ಲ ಮಾದು, ನೀನು ಸಣ್ಣ ಪುಟ್ಟ ವಿಚಾರ ಅಂತ ಅಂದುಕೊಂಡಿದ್ದೀಯಾ... ಮುಂದೆ ಅದು ದೊಡ್ವಿಚಾರ ಆಗೊಕೂ ಮೊದಲೇ ನಾವೊಂದು ತೀರ್ಮಾನಕ್ಕೆ ಬಂದುಬಿಡೋಣ' ಎಂದು ತಮ್ಮನ ಮನ ಒಲಿಸಲು ನೋಡಿದರು.

'ಇಲ್ಲ ಕಣಣ್ಣ. ನೀನು ಏನು ಏಳಿದ್ರೂ ನಾನು ಒಪ್ಪಾಕಿಲ್ಲ. ಈ ಮನೆ ಈಗೆಂಗೆ ಐತೊ ಮುಂದೂ ಅಂಗೇ ಇರ್ಬೇಕು. ನಾ ಇನ್ನೇನು ಮಾತಾಡಕಿಲ್ಲ, ನಾ ವೋಯ್ತೀನಿ' ಎಂದು ಮಾದು ಎದ್ದು ನಿಲ್ಲುವಷ್ಟರಲ್ಲಿ ಕೋಣೆಯಿಂದಾಚೆ ಜೋರಾಗಿ ಮಾತನಾಡುವ, ಜೋರಾಗಿ ನಗುವ ಸದ್ದು ಕೇಳಿ ಮೂವರು ಎದ್ದು ಹೊರಗೆ ಬಂದರು.

ಮನೆಯ ಮಕ್ಕಳೆಲ್ಲಾ ಅಲ್ಲಿ ಸೇರಿದ್ದು ಹಾಸ್ಯ ಮಾಡಿಕೊಂಡು, ಒಬ್ಬರಿಗೊಬ್ಬರು ಛೇಡಿಸಿಕೊಂಡು ಮಾತನಾಡುತ್ತಾ ಖುಷಿಯಿಂದ ನಗುತ್ತಿದ್ದರು. ಆ ಖುಷಿಯಲ್ಲಿ ತಾವೂ ಪಾಲ್ಗೊಳ್ಳುವಂತೆ ಮಕ್ಕಳ ಸಮೀಪ ಬಂದು ನಿಂತರು. ಅವರ್ಯಾಕೆ ಅಷ್ಟೊಂದು ತಮಾಷೆ ಮಾಡಿಕೊಂಡು ನಗುತ್ತಿದ್ದಾರೆ ಎಂದು ತಿಳಿಯದೆ ಕುತೂಹಲದಿಂದ ಜಗದೀಶರು, 'ಏನಾತ್ರಮ್ಮ ಹಾಗೆ ನಗ್ತಾ ಇದ್ದೀರಾ, ನಮಗೂ ಸ್ವಲ್ಪ ಹೇಳ್ರೆ, ನಾವು ನಗ್ತೀವಿ' ಅಂತ ಮಕ್ಕಳನ್ನು ಕೇಳಿದರು. ಮಕ್ಕಳ ಗದ್ದಲ ಕೇಳಿ ಶಾಂಭವಿ ಮತ್ತು ವಾರಿಜ ಇಬ್ಬರೂ ಅಡುಗೆ ಮನೆಯಿಂದ ಬಂದರು.

'ಅಪ್ಪ, ವೀರೇಶನ್ನ ನೋಡು, ಹುಡುಗಿಯಾಗಿ ಬಿಟ್ಟಿದ್ದಾನೆ' ಎಂದು ಜೋರಾಗಿ ನಗುತ್ತಾ ವೀರೇಶನನ್ನು ಮುಂದೆ ತಳ್ಳಿದಳು. ಅಕ್ಕಂದಿರ ರೇಷ್ಮೆ ಲಂಗ ರವಿಕೆ ಹಾಕಿಕೊಂಡು, ತುಂಡಾದ ಕೂದಲಿಗೇ ಹೂ ಇಳಿಬಿಟ್ಟುಕೊಂಡಿದ್ದ. ಕೈ ತುಂಬಾ ಬಳೆ ತೊಟ್ಟು, ಹಣೆಗೆ ಬಿಂದಿ, ಕಿವಿಗೆ ಓಲೆಯನ್ನು ಅಂಟಿಸಿಕೊಂಡಿದ್ದ. ಈ ವೇಷದಲ್ಲಿ ಥೇಟ್ ಹೆಣ್ಣು ಹುಡುಗಿಯಂತೆಯೇ ಕಾಣುತ್ತಿದ್ದದ್ದನ್ನು ನೋಡಿ ಜಗದೀಶರು 'ಹುಡುಗಿಯಂತೆಯೇ ಕಾಣುತ್ತಿದ್ದಿಯಲ್ಲೋ, ಎಷ್ಟು ಮುದ್ದಾಗಿ ಕಾಣ್ತಾ ಇದ್ದಿಯಾ' ಎನ್ನುತ್ತಾ ಎತ್ತಿಕೊಂಡು ಅವನ ಕೆನ್ನೆಗೆ ಮುತ್ತಿಟ್ಟರು. ಶಾಂಭವಿಯೂ ನಗುತ್ತಾ 'ಅಲ್ಲ ಕಣೊ ವೀರೂ, ನಮ್ಮ ಮನೆಲಿ ಹೆಣ್ಣು ಮಕ್ಕಳೆ ಜಾಸ್ತಿ, ನೀನೊಬ್ಬನೆ ಗಂಡು ಹುಡುಗ ಇರೋದು, ನೀನೂ ಹೆಣ್ಣಾಗೋಕೆ ಹೊಂಟಿದ್ದಿಯಲ್ಲೊ, ಗೊಂಬೆ, ಗೊಂಬೆ ಅಂಗೆ ಕಾಣ್ತ ಇದ್ದೀಯಾ. ಥೂ ಕಳ್ಳ' ಅನ್ನುತ್ತಾ ಪತಿಯ ತೋಳಿನಲ್ಲಿದ್ದ ವೀರುನ ಕೆನ್ನೆ ಹಿಂಡಿದಳು ಮುದ್ದಿನಿಂದ.

ಇದನ್ನೆಲ್ಲ ನೋಡ್ತಾ ನಿಂತಿದ್ದ ವಾರಿಜಳಿಗೆ ಏನನ್ನಿಸಿತೊ ಬಾವನ ತೋಳುಗಳಲ್ಲಿದ್ದ ಮಗನನ್ನು ರಭಸವಾಗಿ ಎಳೆದುಕೊಂಡವಳೇ 'ನಿಂಗೇನು ಬಂತೋ ರೋಗ, ಯಾವಾಗ್ಲೂ ಹುಡುಗಿ ಥರಾ ಆಡೋಕೆ ನೋಡ್ತಿಯಾ, ನೀನು ಗಂಡು ಹುಡುಗ ಕಣೊ, ಈ ಹೂವು ಬಳೆ ಲಂಗ ಎಲ್ಲ ಹೆಣ್ಣು ಮಕ್ಕಳು ಹಾಕ್ಕೊಳ್ಳೋದು, ಇನ್ನೊಂದು ದಿನ ಇಂಗೆಲ್ಲಾ ಹಾಕಿಕೊಂಡ್ರೆ ನಿನ್ನ ಕೈಕಾಲು ಮುರ್ದಾಕಿ ಬಿಡ್ತೀನಿ' ಅಂದವಳೆ ಅವನ ತಲೆಯಲ್ಲಿದ್ದ ಹೂವನ್ನು ಕಿತ್ತು ಹಾಕಿದಳು, ಕೈಯಲ್ಲಿದ್ದ ಬಳೆನಾ ತೆಗೆದು ಎಸೆದಳು.

(ಸಶೇಷ)